159ನೇಅ
(17)

<u>ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಪುಟ್ಟಣ್ಣ ಇವರು ಮಂಡಿಸಿರುವ ನಿಯಮ-330ಕ್ಕೆ ಉತ್ತರ</u>

**ವಿಷಯ**

**ರಾಜ್ಯದಲ್ಲಿ 1995 ರಿಂದ 2025ರ ಅವಧಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಅನುದಾನರಹಿತವಾಗಿ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು ಪ್ರಾರಂಭವಾಗಿ ಹಲವಾರು ಶಾಲೆಗಳು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುತ್ತಾ ಬರುತ್ತಿವೆ. ಸದರಿ ಶಾಲೆಗಳಲ್ಲಿ ಸಾವಿರಾರು ಬೋಧಕ ಬೋಧಕೇತರ ಸಿಬ್ಬಂದಿಯವರು ಕನಿಷ್ಠ ವೇತನ ಪಡೆದು ಉತ್ತಮ ಶಿಕ್ಷಣ ನೀಡುತ್ತಾ ಬರುತ್ತಿದ್ದಾರೆ. ಈ ಸಿಬ್ಬಂದಿವರ್ಗದವರು ಇದನ್ನ ನಂಬಿಕೊಂಡು ಜೀವನ ನಡೆಸುತ್ತಿದ್ದು ವಯೋಮಿತಿ ಮೀರಿದ್ದು, ಬಹಳ ಸಂಕಷ್ಟ ಎದುರಿಸುತ್ತಿದ್ದಾರೆ. ಆದ್ದರಿಂದ 1995 ರಿಂದ 2025ರವರೆಗೆ ಪ್ರಾರಂಭವಾಗಿ ಸತತವಾಗಿ ನಡೆಯುತ್ತಿರುವ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಬೇಕೆಂಬ ವಿಷಯವನ್ನು ನಿಯಮ -330 ರಲ್ಲಿ ಪ್ರಸ್ತಾಪಿಸಿರುತ್ತಾರೆ.**

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ: ಇಡಿ 217 ಪಿ ಎಂ ಸಿ 2008 ದಿನಾಂಕ: 08-09-2008 ರಲ್ಲಿ ರಾಜ್ಯದಲ್ಲಿ 1994-95ನೇ ಸಾಲಿನವರೆಗೆ ಪ್ರಾರಂಭವಾಗಿ ಸತತವಾಗಿ ನಡೆಯುತ್ತಿರುವ ಖಾಸಗಿ ಅನುದಾನರಹಿತ ಕನ್ನಡ ಮಾಧ್ಯಮ ಪ್ರೌಢ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಆದೇಶಿಸಲಾಗಿದೆ. ಅದರಂತೆ ಸದರಿ ಅವಧಿಯವರೆಗೆ ಪ್ರಾರಂಭಿಸಲಾದ ಕನ್ನಡ ಮಾಧ್ಯಮದ ಅನುದಾನಿತ ಪ್ರೌಢ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ.

1995 ರಿಂದ 2025ರವರೆಗೆ ಪ್ರಾರಂಭವಾಗಿ ನಡೆಯುತ್ತಿರುವ ಖಾಸಗಿ ಅನುದಾನರಹಿತ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಸಹಾಯನುದಾನಕ್ಕೆ ಒಳಪಡಿಸುವ ಕುರಿತು ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಇಪಿ 259 ಎಸ್ಇಎಸ್2026**

**(ಎಸ್. ಮಧುಬಂಗಾರಪ್ಪ )**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಇಲಾಖಾ ಸಚಿವರು